


# ಮೊಬೈಲ್ ಚಾರ್ಜ್‌ಗೆ ಒಂದೇ ನಿಮಿಷ

★ ಐ. ಜಿ. ಕರಾಯ

ಸ್ಮಾರ್ಟ್‌ಫೋನ್ ಬಳಸುವವರಿಗೆಲ್ಲಾ ಒಂದು ಸಾಮಾನ್ಯ ಸಮಸ್ಯೆಯೆಂದರೆ ಅದರ ಬ್ಯಾಟರಿಯದ್ದು. ಎಷ್ಟು ಚಾರ್ಜ್ ಮಾಡಿದರೂ ಬ್ಯಾಟರಿಯೇ ನಿಲ್ಲುವುದಿಲ್ಲ. ಈಗಷ್ಟೇ ಫುಲ್ ಚಾರ್ಜ್ ಆಗಿದ್ದ ಬ್ಯಾಟರಿ ಅರ್ಧ ಗಂಟೆಯಲ್ಲೇ 'low' ತೋರಿಸುತ್ತಿದೆ ಎಂದು ಅಲವತ್ತುಕೊಳ್ಳುವವರೇ ಹೆಚ್ಚು. ಹಾಗೆಯೇ ಹೊಸದಾಗಿ ಮೊಬೈಲ್ ಕೊಳ್ಳುವ ಸಂದರ್ಭದಲ್ಲಿ ಕೇಳುವ ಸಾಮಾನ್ಯ ಪ್ರಶ್ನೆ– ಬ್ಯಾಟರಿ ಎಷ್ಟು ದಿನ ಬರುತ್ತದೆ?

ಸ್ಮಾರ್ಟ್‌ಫೋನ್‌ಗಳ ಬ್ಯಾಟರಿ ಅವುಗಳ ಬಳಕೆಯನ್ನು ಅವಲಂಬಿಸಿರುತ್ತದೆ. 3ಜಿ, ಚಾಟ್, ಇಂಟರ್‌ನೆಟ್ ಮತ್ತು ಗೇಮ್ಸ್ ಎಂದೆಲ್ಲಾ ಬಳಸಿದರೆ ಬ್ಯಾಟರಿ ಬೇಗನೇ ತನ್ನ ಆಯಸ್ಸು ಕಳೆದುಕೊಳ್ಳುತ್ತದೆ. ಹಾಗೆಯೇ ಬ್ಯಾಟರಿ ಬಾಳಿಕೆಯ ಸಮಸ್ಯೆಯನ್ನು ಅನುಭವಿಸುತ್ತಿರುವವರೆಲ್ಲ ಪವರ್ ಬ್ಯಾಂಕ್ ಬಳಸುತ್ತಾರೆ. ದುಬಾರಿ ಮೊಬೈಲ್ ಕೊಂಡರೂ ಬ್ಯಾಟರಿ ಸಮಸ್ಯೆ ಇದ್ದದ್ದೇ, ಹಾಗಾಗಿ ಸ್ಮಾರ್ಟ್‌ಫೋನ್ ಕೊಳ್ಳುವಾಗ ಜೊತೆಗೇ ಹೆಚ್ಚಿನ ಸಾಮರ್ಥ್ಯದ ಪವರ್‌ಬ್ಯಾಂಕ್ ಕೊಳ್ಳುವವರೂ ಇದ್ದಾರೆ. ಜೊತೆಗೇ ಚಾರ್ಜರ್ ಒಯ್ಯುವವರಿಗೇನೂ ಕಡಿಮೆಯಿಲ್ಲ.

ಬ್ಯಾಟರಿ ಸೇವರ್ ಎಂಬ ಹೆಸರಿನ ಸಾಕಷ್ಟು ಆ್ಯಪ್‌ಗಳು ಬಂದಿದ್ದರೂ, ಅದರಿಂದ ಹೇಳಿಕೊಳ್ಳುವಂತಹ ಪ್ರಯೋಜನವೇನಿಲ್ಲ. ಬ್ಯಾಟರಿ ಸೇವ್ ಮೋಡ್‌ನಲ್ಲಿಟ್ಟರೂ ಪರಿಹಾರವಾಗದ ಈ ಸಮಸ್ಯೆಗೆ ಇದೀಗ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ಪರಿಹಾರ ಕಂಡುಕೊಂಡಿದ್ದಾರೆ. ಹೊಸ ತಂತ್ರಜ್ಞಾನದಲ್ಲಿ ಫೋನ್ ಬ್ಯಾಟರಿಯನ್ನು ನಿಮಿಷದಲ್ಲಿಯೇ ಚಾರ್ಜ್ ಮಾಡಬಹುದು ಎಂದು ತಜ್ಞರು ತಿಳಿಸಿದ್ದಾರೆ.

ಈಗಿರುವ ಬ್ಯಾಟರಿಗಳು ಲಿಥಿಯಂ ಆಯಾನ್ ಮತ್ತು ಅಲ್ಕಾಲೈನ್ ಬ್ಯಾಟರಿಯನ್ನು ಬಳಸುತ್ತವೆ. ಅದರೆ ಈ ಹೊಸ ಸಂಶೋಧನೆಯಿಂದ ಬ್ಯಾಟರಿಯನ್ನು ನಿಮಿಷದಲ್ಲೇ ಚಾರ್ಜ್ ಮಾಡಬಹುದು. ಈ ಬ್ಯಾಟರಿ ಅಲ್ಯೂಮಿನಿಯಂನದ್ದಾಗಿದ್ದು, ಬಿಸಿಯಾಗುವುದಿಲ್ಲ, ಮತ್ತು ದೀರ್ಘ ಅವಧಿ ಬಾಳಿಕೆ ಬರುವ ಬ್ಯಾಟರಿ ಇದಾಗಿದೆ. ಕ್ಷಿಪ್ರಗತಿಯಲ್ಲಿ ಚಾರ್ಜ್ ಆಗುವ ಈ ಬ್ಯಾಟರಿ, ಬಳಕೆದಾರ ಸ್ನೇಹಿಯಾಗಲಿದೆ. ಶಾಖ ಹೆಚ್ಚಾಗಿ ಸ್ಫೋಟವಾಗುವ ಸಮಸ್ಯೆಯೂ ಇರುವುದಿಲ್ಲ ಎಂದು ಸ್ಟ್ಯಾನ್‌ಫೋರ್ಡ್ ವಿವಿಯ ರಸಾಯನಶಾಸ್ತ್ರ ಪ್ರಾಧ್ಯಾಪಕ ಹೋಜೆಂಗ್ ಡೇ ಹೇಳುತ್ತಾರೆ.

ಹಾಗಾಗಿ ಈ ಬ್ಯಾಟರಿಗಳು ಮುಂದೆ ಬಳಕೆಗೆ ಬಂದ ಮೇಲೆ ಬ್ಯಾಟರಿ ಚಾರ್ಜ್ ಆಗಲು ಗಂಟೆಗಳ ಕಾಲ ಕಾಯಬೇಕಿಲ್ಲ, ಕೆಲವೇ ನಿಮಿಷದಲ್ಲಿ ಬ್ಯಾಟರಿಫುಲ್ ಮಾಡಿಕೊಂಡು ಬಳಸಲು ಅಡ್ಡಿಯಿಲ್ಲ. ಅಲ್ಲದೇ ಮಾತನಾಡುತ್ತಾ ಎಲ್ಲಿ ಬ್ಯಾಟರಿ ಮುಗಿದು ಹೋಗುವುದೋ ಎಂಬ ಚಿಂತೆಯಲ್ಲಿರುವವರಿಗೆ ಇದರಿಂದ ಪ್ರಯೋಜನವಾಗಲಿದೆ. ಪ್ರಯಾಣ ಸಂದರ್ಭದಲ್ಲೂ ಇದು ಅನುಕೂಲ.



INDIA DENTAL WORLD

ಇದು ರಜೆಯ ವಿರಾಮದ ಸಮಯ. ಈ ಸಮಯಕ್ಕೆ ಸ್ವಲ್ಪ ರಂಗೇರಿಸೋಣವೇ? ಹೊಸ ಸವಾಲುಗಳನ್ನು ಎದುರಿಸೋಣವೇ? ನಿಮ್ಮ ಆರೋಗ್ಯವನ್ನು ಇಮ್ಮಡಿಗೊಳಿಸೋಣವೇ? ಹಾಗಾದರೆ ತೊಗೊಳ್ಳಿ, ಕೆಲವು ಸವಾಲುಗಳು; ಎಲ್ಲಾ ವಯೋಮಾನದವರಿಗೆ. ಆಯ್ಕೆಯಾದ ಬರಹ/ಚಿತ್ರಗಳಿಗೆ ಸೂಕ್ತ ಬಹುಮಾನ ಉಂಟು.

ಚಿತ್ರ ಬಿಡಿಸುವ ಸ್ಪರ್ಧೆ

ವಿಷಯ: (1) ಹಲ್ಲಿನ ಆಕಾರ (2) ವಿವಿಧ ರೀತಿಯ ಹಲ್ಲುಗಳು. (3) ದಂತಕುಳಿ–ಹಂತಗಳು (4) ದಂತ ಇಂಪ್ಲಾಂಟ್‌ಗಳು

ದಂತಚಿಕಿತ್ಸಾಲಯದಲ್ಲಿ ನಿಮ್ಮ ಅನುಭವ

ವಿಷಯ: ಓದುಗರನ್ನು ನಗಿಸಬಲ್ಲ. ದಂತಚಿಕಿತ್ಸಾಲಯದಲ್ಲಿ ನಿಮಗಾದ ಅನುಭವ. ಇದು ಚಿಕ್ಕದಾಗಿದ್ದು 400 ಪದಗಳನ್ನು ಮೀರಬಾರದು

www.indiadentalworld.com

ನಮ್ಮ ತಾಣಕ್ಕೆ ತಕ್ಕುದಾದ Punchline ಅನ್ನು ಕೊಡುವುದು.
ಇದು ಹಲ್ಲಿನ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿ ಇರುವ ಅಂತರ್ಜಾಲ ತಾಣ.



ಇದರಲ್ಲಿ ನೀವು ನಿಮ್ಮ ಸಮೀಪದ ದಂತವೈದ್ಯರನ್ನುಹುಡುಕಬಹುದು. ಅವರೊಂದಿಗೆ On-line ಅಪಾಯಿಂಟ್‌ಮೆಂಟ್ ಪಡೆಯಬಹುದು.

Book Appointments
Online in Real-time

Dental Health Care ವಿಭಾಗದಲ್ಲಿ ಹಲ್ಲಿನ ಆರೋಗ್ಯ, ತೊಂದರೆಗಳು ಹಾಗೂ ಚಿಕಿತ್ಸೆಗಳ ಮಾಹಿತಿಯನ್ನು ಚಿತ್ರ ಹಾಗೂ ವಿಡಿಯೋಗಳೊಂದಿಗೆ ಪಡೆಯಬಹುದು.






ನೀವು ಬಳಸಬಹುದಾದ Dental Care Products ಬಗ್ಗೆ ತಿಳಿದು ನಿಮಗೆ ಸೂಕ್ತವಾದುದನ್ನು ಆರಿಸಬಹುದು.

ನೀವು ತಿಳಿಯಬೇಕಾದ ಹಲ್ಲಿನ ಆರೋಗ್ಯ, ದಂತ ಚಿಕಿತ್ಸಾಲಯಗಳ ಬಗ್ಗೆ ಡೆಂಟಲ್ ಬ್ಲಾಗ್




ಇಷ್ಟೇ ಅಲ್ಲ, ಆಯ್ದ ಕೆಲವು ದಂತವೈದ್ಯರ ಬಳಿ ನೀವು ಉಚಿತ ದಂತ ತಪಾಸಣೆಯನ್ನು ಪಡೆಯಬಹುದು.

ವಿ.ಸೂ: ದಂತವೈದ್ಯರು ಉಚಿತವಾಗಿ ನಮ್ಮ ತಾಣದಲ್ಲಿ ನೋಂದಾಯಿಸಿಕೊಂಡು ತಮ್ಮ ದಂತ ವೈದ್ಯಾಲಯದ ಮಾಹಿತಿ ಜನರಿಗೆ ನೀಡಬಹುದು.

ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಹಾಗೂ ಹೆಚ್ಚಿನ ಮಾಹಿತಿ ಪಡೆಯಲು ಭೇಟಿ ನೀಡಿ

www.indiadentalworld.com

ಸ್ಪರ್ಧೆಯ ಕಡೇ ದಿನಾಂಕ: 31.05.2015

SOURAV
OREVA e BIKE

AUTHORISED DISRIBUTOR FOR KARNATAKA

Contact Us: #588,
Opp. Corporation Bank,
HMT Layout,
Vidyaranyapura Main Road,
Bangalore - 560097
Ph: 9880066001, 9243566001
www.souravebike.com

NO – PETROL / NO –LICENCE
NO NEED OF REGISTRATION
NO GEARS / NO POLLUTION



Looking for Dealers in Karnataka

Costs only 12 Paise per KM